**ಓ.ಎಸ್. ನಂ. 59/2023** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 17.8.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕಃ 26.12.2022 ರಂದು ವಾದಿಯು ನಮಗೆ ನೀಡಿರುವ ನೋಟಿಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಡಿ 2 ಎಂದು, ದಿನಾಂಕಃ 11.01.2023 ರಂದು ಸದರಿ ನೋಟಿಸ್ ಗೆ ನೀಡಿರುವ ಉತ್ತರವನ್ನು ನಿಡಿ 3 ಎಂದು, 02 ಅಂಚೆ ರಶೀದಿಗಳನ್ನು ನಿಡಿ 4 ಮತ್ತು 5 ಎಂದು, 02 ಅಂಚೆ ಸ್ವೀಕೃತಿಗಳನ್ನು ನಿಡಿ 6 ಮತ್ತು 7 ಎಂದು, ದಿನಾಂಕಃ 29.03.2023 ರಂದು ವಾದಿಯು ನೀಡಿದ ರಿಜಾಯಂಡರ್ ನೋಟಿಸ್ ನ್ನು ಹಾಜರುಪಡಿಸಿದ್ದು ನಿಡಿ 8 ಎಂದು, ಸದರಿ ನೋಟಿಸ್ ಗೆ ನೀಡಿದ ಉತ್ತರವನ್ನು ಹಾಜರುಪಡಿಸಿದ್ದು ನಿಡಿ 9 ಎಂದು, 02 ಅಂಚೆ ರಶೀದಿಗಳನ್ನು ನಿಡಿ 10 ಮತ್ತು 11 ಎಂದು, 02 ಅಂಚೆ ಸ್ವೀಕೃತಿ ಪತ್ರಗಳನ್ನು ನಿಡಿ 12 ಮತ್ತು 13 ಎಂದು, ನನ್ನ ಅಳಿಯನಿಗೆ ಸಂಬಂಧಪಟ್ಟ ಹೆಚ್.ಡಿ.ಎಫ್.ಸಿ ಬ್ಯಾಂಕಿನ ಗಂಗಾನಗರ ಶಾಖೆಯ ಉಳಿತಾಯ ಖಾತೆಯ ಖಾತಾ ನಕಲನ್ನು ಹಾಜರುಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ 14 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.